## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಕೆ.ಸಣ್ಣವೀರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಕೂಡ್ಲಿಗಿ ಮತ್ತು ಶ್ರೀ ಸೈಯದ್ ಹಜರತ್ ಷಾಹ ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಕೂಡ್ಲಿಗಿ ಇವರುಗಳ ಅಮಾನತ್ತು ತೆರವುಗೊಳಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 14 ವಿಸೇಬಿ 2014, ದಿನಾಂಕ: 25-01-2014
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 14 ವಿಸೇಬಿ 2014, ದಿನಾಂಕ: 03-04-2014
3) ಶ್ರೀ ಕೆ.ಸಣ್ಣವೀರಪ್ಪ, ಮತ್ತು ಶ್ರೀ ಸೈಯದ್ ಹಜರತ್ ಷಾಹ, ಇವರ ಲಿಖಿತ ಹೇಳಿಕೆ ದಿನಾಂಕ:06-03-2014

***

**ಪ್ರಸ್ತಾವನೆ:**

ಶ್ರೀ ಕೆ.ಸಣ್ಣವೀರಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕೂಡ್ಲಿಗಿ ಇವರು ದಿನಾಂಕ: 01-08-2011ರಿಂದ 21-01-2013 ಮತ್ತು 06-04-2013 ರಿಂದ 26-04-2013 ರವರೆಗೆ ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಲೆಕ್ಕಶೀರ್ಷಿಕೆ 2515-00-102-0-61ಅಡಿ 8 ಡಿ.ಸಿ.ಬಿಲ್ಲುಗಳನ್ನು ತಯಾರು ಮಾಡಿ ಆ ಬಿಲ್ಲುಗಳ ಮೂಲಕ ರೂ. 2,06,265/-ಗಳನ್ನು ಸೆಳೆದು ಆ ಹಣವನ್ನು ಶ್ರೀ ಧನಂಜಯ ನಾಯ್ಡು ದ್ವಿ.ದ.ಸ. ಮತ್ತು ವಿಷಯ ನಿರ್ವಾಹಕ ಇವರ ಎಸ್.ಬಿ.ಎಂ.ಬ್ಯಾಂಕಿನಲ್ಲಿ ಹೊಂದಿರುವ ಖಾತೆ ಸಂಖ್ಯೆ; 54041931677ಕ್ಕೆ ಜಮಾ ಮಾಡಿರುವುದರಿಂದ ಹಾಗೂ ಶ್ರೀ ಸೈಯದ್ ಹಜರತ್ ಷಾಹ ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಕೂಡ್ಲಿಗಿ ಇವರು ದಿನಾಂಕ 27-04-2013 ರಿಂದ 19-06-2013 ರವರೆಗೆ ಮತ್ತು 28-06-2013 ರಿಂದ 30-10-2013 ರವರೆಗೆ ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2515-00-102-0-61ಅಡಿ ಲೆಕ್ಕ ಶೀರ್ಷಿಕೆಯಡಿ 8 ಡಿ.ಸಿ. ಬಿಲ್ಲುಗಳನ್ನು ತಯಾರು ಮಾಡಿ ಆ ಬಿಲ್ಲುಗಳ ಮೂಲಕ ರೂ.3,03,208/-ಗಳನ್ನು ಖಜಾನೆಯಿಂದ ಸೆಳೆದು ಶ್ರೀ ಧನಂಜಯ ನಾಯ್ಡು ದ್ವಿ.ದ.ಸ. ಮತ್ತು ವಿಷಯ ನಿರ್ವಾಹಕ ಇವರ ಎಸ್.ಬಿ.ಎಂ.ಬ್ಯಾಂಕಿನಲ್ಲಿ ಹೊಂದಿರುವ ಖಾತೆ ಸಂಖ್ಯೆ:54041931677ಕ್ಕೆ ಜಮಾ ಮಾಡಿ ಹಣ ದುರುಪಯೋಗಕ್ಕೆ ಕಾರಣರಾಗಿರುವುದರಿಂದ ಮೇಲ್ಕಂಡ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಮತ್ತು ಕ್ರಿಮಿನಲ್ ಮೊಕದ್ದಮೆಯನ್ನು ಬಾಕಿ ಇಟ್ಟು ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 25-01-2014 ರ ಸರ್ಕಾರಿ ಆದೇಶದಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಸದರಿ ಅಧಿಕಾರಿಗಳ ವಿರುದ್ದದ ಆರೋಪಗಳ ಕುರಿತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ, ಸದರಿ ನಿಯಮಾವಳಿಗಳ ನಿಯಮ-13 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಚಾರಣಾಧಿಕಾರಿ ಮತ್ತು ಮಂಡನಧಿಕಾರಿಯನ್ನು ನೇಮಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಗಳನ್ನು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅವರುಗಳ ಅಮಾನತ್ತು ತೆರವುಗೊಳಿಸಿ, ಅವರುಗಳನ್ನು ಸೇವೆಗೆ ಪುನರ್‌ಸ್ಥಾಪಿಸಲು ಸರ್ಕಾರವು ನಿರ್ಧರಿಸಿದೆ. ಅದರನ್ವಯ ಮುಂದಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 14 ವಿಸೇಬಿ 2014**
**ಬೆಂಗಳೂರು, ದಿನಾಂಕ:24/06/2014.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಕೆ.ಸಣ್ಣವೀರಪ್ಪ, ಉಪನಿರ್ದೇಶಕರು, ಯೋಜನೆ ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಕೂಡ್ಲಿಗಿ ಮತ್ತು ಶ್ರೀ ಸೈಯದ್ ಹಜರತ್ ಷಾಹ ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಕೂಡ್ಲಿಗಿ ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸದರಿ ಅಧಿಕಾರಿಗಳ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಿದೆ.

ಶ್ರೀ. ಕೆ.ಸಣ್ಣವೀರಪ್ಪ, ಉಪನಿರ್ದೇಶಕರು, ಇವರನ್ನು ಅವರ ಮಾತೃ ಇಲಾಖೆಯಾದ ಯೋಜನೆ ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆಗೆ ಹಿಂದಿರುಗಿಸಿದೆ.

ಶ್ರೀ ಸೈಯದ್ ಹಜರತ್ ಷಾಹ, ಕಾರ್ಯನಿರ್ವಾಹಕ ಅಧಿಕಾರಿ ಇವರಿಗೆ ಪ್ರತ್ಯೇಕವಾಗಿ ಸ್ಥಳನಿಯುಕ್ತಿಗೊಳಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ–ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ.
4. ಸರ್ಕಾರದ ಅಧೀನ ಕಾರ್ಯದರ್ಶಿ ಯೋಜನೆ ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರ ಮುಖಾಂತರ).

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
3. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.